ದಿಃ 21-09-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ

ಶ್ರೀ ಹೆಚ್.ಎಂ.ಎಸ್. ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ.

ಪ್ರತಿವಾದಿ ಬರೆದುಕೊಟ್ಟ ಕ್ರಯ ಕರಾರು ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ಪ್ರತಿವಾದಿ ಪರ ವಕೀಲರು ತಕರಾರ ಮಾಡಿರುತ್ತಾರೆ. ಸದರಿ ವಕೀಲರು ತಮ್ಮ ತಕರಾರಿನಲ್ಲಿ ದಾಖಲೆ ಸೃಷ್ಟನೆ ಮಾಡಿರುವ ಕಾರಣ ಗುರುತಿಸಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ಅದಕ್ಕೆ ಪ್ರತ್ಯುತ್ತರವಾಗಿ ವಾದಿ ಪರ ವಕೀಲರು ಸೃಷ್ಟನೆ ಬಗ್ಗೆ ಸಾಕ್ಷಿ ವಿಚಾರಣೆಯಲ್ಲಿ ರುಜುವಾತು ಪಡಿಸಬೇಕು ಮತ್ತು ದಾಖಲೆಯನ್ನು ಕಾನೂನು ಅಡಿಯಲ್ಲಿ ಬರೆದಿರುವ ಕಾರಣ ನಿಶಾನೆಯಾಗಿ ಗುರುತಿಸಲು ಬರುತ್ತದೆ ಎಂದು ಪ್ರತಿವಾದ ಮಾಡಿರುತ್ತಾರೆ.

ದಾಖಲೆಯನ್ನು ಪರಿಶೀಲಿಸಲಾಗಿ ಅದು ಶುದ್ಧ ಕ್ರಯದ ಕರಾರು ಪತ್ರ ಆಗಿದ್ದು, ಸದರಿ ಪತ್ರವನ್ನು 100 ರೂ ಸ್ಟಾಂಪ್ ಹಾಳೆಯ ಮೇಲೆ ಬರೆಯಲಾಗಿರುತ್ತದೆ. ಅದೇ ರೀತಿ ಸದರಿ ಕರಾರು ತಪ್ರದಡಿಯಲ್ಲಿ ದಾವಾ ಆಸ್ತಿಯ ಸ್ವಾಧೀನವನ್ನು ವಹಿಸಿಕೊಟ್ಟಿರುವುದಿಲ್ಲ, ಹಾಗಾಗಿ ದಾಖಲೆಯನ್ನು ಸೃಷ್ಟನೆ ಮಾಡಲಾಗಿದೆಯೋ ಇಲ್ಲವೋ ಎನ್ನುವ ವಿಚಾರವನ್ನು ಸಂಬಂಧಪಟ್ಟ ಪಕ್ಷಕಾರರು ತಮ್ಮ ಸಾಕ್ಷ್ಯ ಹೇಳಿಕೆಯಲ್ಲಿ ರುಜುವಾತು ಮಾಡಬೇಕಾಗಿರುತ್ತದೆ. ಆದ್ದರಿಂದ ಪ್ರತಿವಾದ ಪರ ವಕೀಲರ ವಾದವನ್ನು ತಳ್ಳಿಹಾಕಿ ಅದನ್ನು ನಿಶಾನೆಯಾಗಿ ಗುರುತಿಸಲಾಯಿತು. ಅದನ್ನು ನಿಪಿ1 ಎಂದು ಗುರುತಿಸಲಾಯಿತು.

ನಿಪಿ 1 ರಲ್ಲಿ ಸಾಕ್ಷಿ ಪ್ರತಿವಾದಿ ಪಾಂಡುರಂಗಭಟ್‌ರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ನನ್ನ ಸಮಕ್ಷಮ ಸಾಕ್ಷಿದಾರರಾದ ಆನಂದಪ್ಪ, ವಿಲಾಸ್ ಲದ್ವ, ಜಿ. ಆನಂದ, ಚಿಲಕೂರಿ ಗಂಗರಾಜು, ಎನ್. ಆದಿನಾರಾಯಣ, ಎನ್, ದೋರಯ್ಯ ಸಹಿಗಳನ್ನು ಮಾಡಿರುತ್ತಾರೆ. ಸಾಕ್ಷಿ ಸದರಿಯವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಆನಂದಪ್ಪರವರ ಸಹಿ ನಿಪಿ1(ಬಿ) ಎಂದು, ವಿಲಾಸ್ ಲದ್ವರವರ ಸಹಿ ನಿಪಿ1(ಸಿ) ಎಂದು, ಜಿ. ಆನಂದರವರ ಸಹಿ ನಿಪಿ1(ಡಿ) ಎಂದು, ಚಿಲಕೂರಿ ಗಂಗರಾಜುರವರ ಸಹಿಯನ್ನು ಸಹಿ ನಿಪಿ1(ಇ) ಎಂದು, ಎನ್. ಆದಿನಾರಾಯಣರವರ ಸಹಿ ನಿಪಿ1(ಎಫ್) ಎಂದು, ಎನ್. ದೋರಯ್ಯರವರ ಸಹಿ ನಿಪಿ1(ಜಿ) ಎಂದು ಗುರುತಿಸಲಾಯಿತು. ಸದರಿ ಪತ್ರವನ್ನು ಸುರೇಶ್ ಶಾಸ್ತ್ರಿ ಎನ್ನುವವರು ಬರೆದು ಸಹಿ ಮಾಡಿರುತ್ತಾರೆ. ಸಾಕ್ಷಿ ಸದರಿಯವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ನಿಪಿ 1(ಹೆಚ್) ಎಂದು ಗುರುತಿಸಲಾಯಿತು.

ಸರ್ವೆ ನಂ 202/ಪಿಗೆ ಸಂಬಂಧಿಸಿದ 3 ಮ್ಯುಟೇಷನ್ ರಿಜಿಸ್ಟರ್ ಎಕ್ಸಾಕ್ಟ್‌ಗಳನ್ನು ನಿಪಿ2 ರಿಂದ 4 ಎಂದು, 3 ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ 5 ರಿಂದ 7 ಎಂದು, ಮ್ಯುಟೇಷನ್ ಪ್ರತಿಯನ್ನು ನಿಪಿ 8 ಎಂದು, ಪ್ರತಿವಾದಿಗೆ ಕಳುಹಿಸಿದ ನೋಟೀಸ್‌ನ ನಕಲನ್ನು ನಿಪಿ 9 ಎಂದು, ಜವಾಬ್ ನೋಟೀಸನ್ನು ನಿಪಿ 10 ಎಂದು, ಅಂಚೆ ರಸೀದಿಯನ್ನು ನಿಪಿ 11 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ 12 ಎಂದು, ಬ್ಯಾಂಕ್ ಪಾಸ್ ಪುಸ್ತಕವನ್ನು ನಿಪಿ 13 ಎಂದು, ಲಾರಿ ವಾಹನದ ಬಿ ರಿಜಿಸ್ಟರ್ ಎಕ್ಸಾಕ್ಟ್‌ನ್ನು ನಿಪಿ 14 ಎಂದು, ಬೋಗ್ಯ ಪತ್ರದ ದೃಢೀಕೃತ ನಕಲನ್ನು

ನಿಪಿ 15 ಎಂದು, 3 ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 16 ರಿಂದ 18 ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಶ್ರೀ ಎಂಎನ್‌ಕೆ. ವಕೀಲರಿಂದಃ

ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.